


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –28 ದಿನಾಂಕ : 21–01–2026


**ದಿನಾಂಕ: 21.01.2026 ರಂದು ಬುಧವಾರದ ವಾರದ ಸಭೆಯಲ್ಲಿ, ಉದ್ಯಮಿ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಶ್ರೀನಾಥ ನಗರಗದ್ದೆ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ, "ನಿಗೂಢ ಜಗತ್ತು" ಎಂಬ ವಿಷಯವಾಗಿ ವೀಡಿಯೋ ಪ್ರಾತ್ಯಕ್ಷಿಕೆ ಮೂಲಕ ವಿವರ ನೀಡುತ್ತಾ ಮಾತನಾಡಿದರು. ಮುಖ್ಯ ಅತಿಥಿಗಳು, ಅಧ್ಯಕ್ಷರಾದ ರೊ.ಆರ್. ಆನಂದ್ ಮತ್ತು ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದರು. ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸುವುದರ ಮೂಲಕ ಸಭೆಗೆ ಚಾಲನೆ ದೊರೆಯಿತು.**




ಸಭೆಯ ಪ್ರಾರಂಭದಲ್ಲಿ ರೊ.ಶ್ರೀಮತಿ ರೇಣುಕಾ ಶ್ರೀನಾಥ ರವರಿಂದ "ಗೋವಿಂದ ನಿನ್ನ ನಾಮವೇ ಚಂದ" ಎಂಬ ಗೀತೆಯ ಸುಶ್ರಾವ್ಯ ಗಾಯನದ ಮೂಲಕ ಪ್ರಾರ್ಥನೆಯಾಯಿತು. ಮಾಜಿ ಸಹಾಯಕ ಗವರ್ನರ್ ರೊ.ಎನ್.ಎಸ್. ಶ್ರೀಧರ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ನೀಡಿದರು ಹಾಗೂ ಹುಟ್ಟು ಹಬ್ಬದ ಶುಭಾಶಯ ಕೋರಿದರು. ನಿಕಟ ಪೂರ್ವ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರವರು ವೇದಿಕೆ ಆಗಮಿಸಿ ಹುಟ್ಟು ಹಬ್ಬದ ಶುಭಾಶಯ ಹಾಗೂ ನೆನಪಿನ ಕಾಣಿಕೆ ಸ್ವೀಕರಿಸಿದರು. ಅಂದಿನ ಸಭೆಯಲ್ಲಿ ರೊ.ಕೆ.ಸೂರ್ಯನಾರಾಯಣ ಉಡುಪರು ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಉಪಹಾರದ ವ್ಯವಸ್ಥೆಯನ್ನು ಮಾಡಿದ್ದರು.

ರೊ. ಎಂ. ಮಾಧವಾಚಾರ್‌ರವರು ಅಂದಿನ ಮುಖ್ಯ ಅತಿಥಿಗಳಾದ ಶ್ರೀ ಶ್ರೀನಾಥ್ ನಗರಗದ್ದೆಯವರನ್ನು ಸಭೆಗೆ ಪರಿಚಯ ಮಾಡಿದರು. ಶ್ರೀನಾಥ್ ನಗರಗದ್ದೆಯವರು ಗಣ್ಯ ಸಮಾಜ ಸೇವಕರು, ಲ್ಯಾಂಡ್ ಡೆವಲಪರ್ ಹಾಗೂ ಸಮುದಾಯದ ಅಭಿವೃದ್ಧಿ ಮತ್ತು



ನಿರಂತರ ಕಲಿಕೆಗೆ ತಮ್ಮನ್ನು ಮುಡಿಪಾಗಿಟ್ಟಿರುವ ಬಹುಶ್ರುತ ವ್ಯಕ್ತಿತ್ವದವರು. ಅಪ್ಪಟ ವಿದ್ಯಾಸಕ್ತರಾದ ಇವರು, ಸಂಸ್ಕೃತ, ಕನ್ನಡ, ಇಂಗ್ಲೀಷ್, ರಾಜ್ಯಶಾಸ್ತ್ರ, ಇತಿಹಾಸ ಮತ್ತು ಸಮಾಜಶಾಸ್ತ್ರ ಸೇರಿದಂತೆ ಒಟ್ಟು ಆರು ವಿಷಯಗಳಲ್ಲಿ ಸ್ನಾತಕೋತ್ತರ (ಎಂ.ಎ.) ಪದವಿಗಳನ್ನು ಪಡೆದಿರುವುದು ಇವರ ವಿಶಾಲವಾದ ಜ್ಞಾನಕ್ಕೆ ಸಾಕ್ಷಿಯಾಗಿದೆ. ಕಾನೂನು ಮತ್ತು ವಾಣಿಜ್ಯ ಕ್ಷೇತ್ರಗಳಲ್ಲೂ ಆಳವಾದ ಪರಿಣಿತಿ ಹೊಂದಿರುವ ಇವರು ಬಿ.ಕಾಂ., ಎಲ್.ಎಲ್.ಬಿ ಪದವಿಗಳ ಜೊತೆಗೆ ಕಾಂಟ್ರಾಕ್ಟ್ ಮತ್ತು ಬಿಸಿನೆಸ್ ಲಾ ವಿಷಯಗಳಲ್ಲಿ ಎರಡು ಎಲ್.ಎಲ್.ಎಂ. ಪದವಿಗಳನ್ನು ಪಡೆದಿರುತ್ತಾರೆ. ಕಲೆ ಮತ್ತು ವಿಜ್ಞಾನ ಕ್ಷೇತ್ರಗಳೆರಡರಲ್ಲೂ ಹಿಡಿತ ಹೊಂದಿರುವ ಇವರು, ಶೈಕ್ಷಣಿಕ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮ ಕೂಡ ಪಡೆದಿರುತ್ತಾರೆ. ಈ ಎಲ್ಲಾ ಸಾಧನೆಗಳಾಚೆಗೆ ಅವರು ಸಮರ್ಥ ನಾಯಕರಾಗಿದ್ದು, ಪೇಸ್ ಕಾಲೇಜು ಮತ್ತು ಶ್ರೀಗಂಧ ಕಲ್ಚರಲ್ ಅಸೋಸಿಯೇಶನ್‌ನ ಸ್ಥಾಪಕ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದ್ದಾರೆ. ಸ್ವತಂತ್ರ ಪರ್ತಕರ್ತರಾಗಿ ಸಮಾಜದ ಒಳಿತಿಗಾಗಿ ನಿರಂತರವಾಗಿ ಧ್ವನಿ ಎತ್ತುತ್ತಿದ್ದಾರೆ. ಅಲ್ಲದೇ ಧಾರ್ಮಿಕ ಕಾರ್ಯಕ್ರಮಗಳಿಗೆ ಬೆಂಗಾವಲಾಗಿ ನಿಲ್ಲುತ್ತಿದ್ದಾರೆ.

## ಈ ವಾರದ ಸಭೆ


**ದಿನಾಂಕ: 28–01–2026, ಬುಧವಾರ** **ಸಂಜೆ 6:45 ಗಂಟೆಗೆ**

# ಕೌಟುಂಬಿಕ ಸ್ನೇಹ ಮಿಲನ

# Family Meet

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ








ಮುಖ್ಯ ಅತಿಥಿಗಳಾದ ಶ್ರೀ ಶ್ರೀನಾಥ್ ನಗರಗದ್ದೆಯವರು ಮಾತನಾಡುತ್ತಾ ನಮ್ಮದೊಂದು 12 ಜನರ "ದ್ವಾದಶೀ" ಎಂಬ ತಂಡವಿದ್ದು ಒಂದೊಮ್ಮೆ ನಿಗೂಡ ಜಗತ್ತು ಎಂಬ ವಿಚಾರದ ಬಗ್ಗೆ ನಾನು ಮಾತನಾಡುವಾಗ ರೊ. ಎಂ. ಮಾಧವಾಚಾರ್‌ರವರು ಇದೇ ವಿಚಾರವಾಗಿ ನಮ್ಮ ರೋಟರಿಯಲ್ಲಿ ಮಾತನಾಡಲು ಪ್ರೇರೇಪಿಸಿದ್ದು, ಇಂದು ಇಲ್ಲಿ ಮಾತನಾಡಲು ನಿಂತಿದ್ದೇನೆ ಎನ್ನುತ್ತಾ ನಿಗೂಡ ಜಗತ್ತಿನ ಕೆಲವೊಂದು ಅಂಶಗಳನ್ನು ಪ್ರೊಜೆಕ್ಟರ್ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿದರು. ನಮಗೆ ಒಂದು ವಸ್ತು, ವಿಷಯ, ಹಿನ್ನೆಲೆ ಇತಿಹಾಸ ತಿಳುವಳಿಕೆ ಇಲ್ಲದಿರುವುದು ಹಾಗೂ ಅಸ್ಪಷ್ಟವಾದರೆ ಅದೇ ನಿಗೂಢ ಎನ್ನಿಸಿಕೊಳ್ಳುತ್ತದೆ. ಕೆಲವೊಂದು ವಿಚಾರಗಳನ್ನು ಸಾಮಾಜಿಕ ಜಾಲತಾಣಗಳಲ್ಲೂ ತಾವುಗಳು ನೋಡಿ ಮಾಹಿತಿ ಪಡೆಯಬಹುದು ಎಂದ ಶ್ರೀ ಶ್ರೀನಾಥ್‌ರವರು 1962 ರ ಕಾಲಘಟ್ಟದಲ್ಲಿ ಅಮೇರಿಕಾದ ನೀಲಂ ಆರ್ಮಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟ ಅನ್ನುವುದೇ ಕೌತುಕ, ನಿಗೂಢ ಮತ್ತು ಕಟ್ಟುಕಥೆ ಎನ್ನಲಾಗಿದೆ. ಗೊತ್ತಿಲ್ಲದ್ದನ್ನು ಹೇಳುವುದೇ ನಿಗೂಢ ಎಂದರು.

ಹೀಗೆ ಕೌತುಕ ನಿಗೂಢದ ಬಗ್ಗೆ ಮಾತನಾಡುತ್ತಾ ಶ್ರೀ ಶ್ರೀನಾಥ್‌ರವರು, ತಮಿಳುನಾಡಿನ ಚಿದಂಬರಂದೇವ ಸ್ಥಾನದ ಬಗ್ಗೆ ಅಲ್ಲಿನ ಕಟ್ಟಡಗಳ ಬಗ್ಗೆ, ಆ ಕಾಲದಲ್ಲಿ ಅಲ್ಲಿ ದೊರೆಯದ ಶಿಲೆಗಳ ಬಗ್ಗೆ ಮಾತನಾಡುತ್ತಾ, ಅದರ ನಿರ್ಮಾಣದ ಕೌತುಕದ ಬಗ್ಗೆ ಮಾತನಾಡಿದರು. ಅಲ್ಲದೇ ಅಲ್ಲಿನ ದೇವರಿಗೆ ಮಂಗಳಾರತಿ ಮಾಡುವಾಗ ಮಾತ್ರ ಗರ್ಭಗುಡಿಯ ಪರದೆ ಸರಿಸುತ್ತಾರೆ ಆದರೆ ಆ ಸಂದರ್ಭದಲ್ಲಿ ಏನು ಕಾಣುತ್ತದೆಯೋ ಅದೇ ದೇವರು ಎನ್ನುತ್ತಾರೆ (ಚಿದಂಬರ) ಇದು ಒಂದು ಕೌತುಕವೇ. ಅದೇ ಚಿದಂಬರ ರಹಸ್ಯ. ಅದೇ ಆಕಾಶ ತತ್ವವನ್ನು ಹೊಂದಿರುವಂತಹುದು, ಗರ್ಭಗುಡಿಯ ಲಿಂಗವನ್ನು ಕತ್ತಲಲ್ಲಿ ನೋಡುವುದೇ ರಹಸ್ಯ ಎಂದರು.

ತಿರುವಾಂಕೂರಿನ (ತ್ರಿವೇಂಡ್ರಮ್‌ನ) ಅನಂತ ಪದ್ಮನಾಭ ದೇವಾಲಯದ ಸಂಪತ್ತಿನ ಬಾಗಿಲುಗಳನ್ನು ಮಂತ್ರ ಶಕ್ತಿಯಿಂದ ಮಾತ್ರವೇ ತೆರೆಯಬೇಕಾಗುತ್ತದೆ. ಇದನ್ನು ನಾಗಗಳು ಕಾಯುತ್ತಿವೆ ಎಂಬ ನಂಬಿಕೆ ಇದೆ. ಇದರ 'ಬಿ' ಕೋಣೆಯು ಸದಾಕಾಲ ಮುಚ್ಚಿರಬೇಕು ಎಂದು ಸುಪ್ರೀಂಕೋರ್ಟ್ ಆದೇಶವಿದೆ. ಇವೆಲ್ಲವುದರ ಚರಿತ್ರೆಗಳನ್ನು ನೋಡಿ, ಕೇಳಿದರೆ, ಇಲ್ಲಿ ಬೇರೆ ಜಗತ್ತಿನ ಜೀವಿಗಳು ಬಂದು ಪೂಜಿಸಿದರು ಎನ್ನಲಾಗಿರುತ್ತದೆ. ಒಟ್ಟಾರೆ ಈಗಿನ ಕಾಲಘಟ್ಟಕ್ಕಿಂತಲೂ ಮುಂದುವರಿದ ಜನಾಂಗವಿತ್ತು. ಆ ಜನಾಂಗ ನಶಿಸಿತು ಎಂಬುದರ ವಾದವನ್ನು ನಾವು ಒಪ್ಪುವುದಿಲ್ಲ. ಈ ಕಾಲಕ್ಕೆ ಪೂರಕವಾಗಿರುವಂತಹ ಕೆಲವು ಅಂಶಗಳಿಗೆ ಪ್ರಾತ್ಯಕ್ಷಿಕೆ ಮೂಲಕ ಕೆಲವು ಹಳೆಯ ದೇವಾಲಯಗಳ ಕೆತ್ತನೆಗಳನ್ನು ವೀಡಿಯೋ ಪ್ರಾತ್ಯಕ್ಷಿಕೆ ಮೂಲಕ ತೋರಿಸಿದರು.

ಈಗ ನಾವು ಎ.ಡಿ. (ಆಫ್ಟರ್ ದಿ ಗಾಡ್ ಮತ್ತು ಬಿ.ಸಿ. ಬಿಫೋರ್ ದಿ ಗಾಡ್) ಎಂದು ಕಾಲವನ್ನು ಸೂಚಿಸಿ ಚರಿತ್ರೆಯನ್ನು ಅರಿಯಲಾಗುತ್ತಿದೆ. ನಮ್ಮ ಗಮನಕ್ಕೆ ಬಂದಂತಹ ಹತ್ತಿರದ ಸ್ಥಳವೊಂದರ ಮಾಹಿತಿ ನೀಡಿದ ಅವರು, ಶಿವಮೊಗ್ಗೆಗೆ ಹತ್ತಿರವಿರುವ ಗುಳಿ ಗುಳಿ ಶಂಕರ ದೇವಸ್ಥಾನದಲ್ಲಿರುವ ಕೊಳದಲ್ಲಿ ನಾವು ಹಾಕುವ ಎಲೆಗಳು ಮೇಲೆದ್ದು ಬರುವ ಕೌತುಕ. ಬೇರೆ ಸ್ಥಳವೊಂದರಲ್ಲಿ 3000 ವರ್ಷಗಳ ಹಿಂದೆ ಸಿಕ್ಕ ಹಳೆಯ ಕಾಲದ ಬ್ಯಾಟರಿಯ ಪರೀಕ್ಷೆಯಲ್ಲಿ ದೊರಕಿದ ಕೌತುಕ. ಆ ಕಾಲದಲ್ಲಿ ವಿಜ್ಞಾನ ಎಷ್ಟು ಮುಂದುವರೆದಿತ್ತು ಎನ್ನುವ ಕೌತುಕ ನಮಗೆ ಕಂಡು ಬರುತ್ತದೆ. ಇದಲ್ಲವನ್ನು ನಾವು ಒಪ್ಪುವುದಿಲ್ಲ. ಅದೇ ನಿಗೂಢ ಅಂಶವಾಗಿದೆ. 1924 ರಲ್ಲಿ ಪೆರಿಪೆರಿಯಲ್ಲಿ ಕ್ರಿಸ್ತ ಪೂರ್ವದಲ್ಲಿ (5000 ವರ್ಷದ ಹಿಂದೆ) ಮುಳುಗಿದ ಹಡಗು ಸಿಕ್ಕಿತು. ಅದರ ಅವಶೇಷದಲ್ಲಿ 37 ಸಣ್ಣ ಸಣ್ಣ ಗೇರುಗಳಿರುವ ಯಂತ್ರ ದೊರಕಿದೆ ಇವೆಲ್ಲವೂ ಕೌತುಕವೇ ಆಗಿದೆ ಎಂದರು.

ಅದೊಂದು ಜಗತ್ತಿನ ಕೌತುಕವೆಂದರೆ ಈಜಿಪ್ಟ್‌ನ ಗೀಜಾ ಪಿರಮಿಡ್. 616 ಅಡಿ ಎತ್ತರದ ಕಟ್ಟಡವಾಗಿದ್ದು, ಇದರಲ್ಲಿ 40 ಅಂತಸ್ತಿನ ಕಟ್ಟಡವನ್ನು ಮಾಡಬಹುದು. ಅದು ಅಷ್ಟು ಎತ್ತರವಾಗಿದೆ. ಅದರೊಳಗಿನ ವಸ್ತುಗಳು. ವಾಸ್ತುಶಿಲ್ಪಗಳು ಇಂದಿಗೂ ಪ್ರಶ್ನಾರ್ಥಕ ವಾಗಿದ್ದು, ನಿಗೂಢತೆಗೆ ನಮ್ಮನ್ನು ತಳ್ಳಿದೆ. ಅಲ್ಲಿ 1.3 ಲಕ್ಷ ಕಲ್ಲುಗಳಿವೆ. ಪ್ರತಿಯೊಂದು 2.0 ಟನ್ ತೂಗುತ್ತದೆ. ಅವುಗಳನ್ನು ಅಷ್ಟು ಮೇಲಕ್ಕೆ ಹೇಗೆ ಒಯ್ದರು ಎನ್ನುವುದೇ ಸೋಜಿಗದ ವಿಷಯವಾಗಿದೆ. ಇದರೊಳಗೆ ತಂತ್ರಜ್ಞಾನ ಬಳಸಿ ಸ್ಕ್ಯಾನಿಂಗ್ ಮಾಡಿದಾಗ ಇದರ ಮಧ್ಯಭಾಗದಲ್ಲಿ ರಹಸ್ಯ ಕೊಠಡಿಯೊಂದು ಕಂಡು ಬಂದಿದೆ. ಅದನ್ನು ಬೇಧಿಸಲು ಇದುವರೆವಿಗೂ ಸಾಧ್ಯವಾಗಿಲ್ಲ.

ಹಿಂದೆ ರಾಜರಾಜ ಚೋಳನ್ ತಮಿಳುನಾಡಿನ ದೊರೆ ಸುಮಾರು 216 ಅಡಿ ಎತ್ತರದಲ್ಲಿ ಕಟ್ಟಿಸಿರುವ ಬೃಹದೀಶ್ವರ ದೇವಸ್ಥಾನ ಇಂದಿಗೂ ಅತ್ಯಂತ ವಿಸ್ಮಯಕಾರಿಯಾಗಿದೆ. 1.5 ಲಕ್ಷ ಕಲ್ಲುಗಳನ್ನು ಬಳಸಲಾಗಿದ್ದು, ತಂಜಾವೂರಿನಲ್ಲಿ ಈ ತರಹೆಯ ಕಲ್ಲುಗಳ ಅಲಭ್ಯವಾಗಿದ್ದು ಎಲ್ಲಿಂದ ಇಲ್ಲಿಗೆ ತಂದರು ಎನ್ನುವುದು ಕುತೂಹಲಕಾರಿಯಾಗಿದೆ ಎಂದರು. 6.50 ಕಿ.ಮಿ ನಿಂದ ತಂದರೂ 70 ಆನೆಗಳು 2000 ಜನರು ಸಹಕರಿಸಬೇಕಾಗುತ್ತದೆ. ಇಲ್ಲಿರುವ ಲಿಂಗ ಸುಮಾರು 80 ಟನ್ ಭಾರವಿದ್ದು ಇದನ್ನು ಸೌರಾಷ್ಟ್ರದಿಂದ ತರಲಾಗಿದೆ ಎಂದಿದ್ದಾರೆ. ಇದಕ್ಕೊಂದು ಉದಾಹರಣೆ ನೀಡಿದ ಶ್ರೀ ಶ್ರೀನಾಥರವರು ಧರ್ಮಸ್ಥಳದ ಬಾಹುಬಲಿಯನ್ನು ಕಾರ್ಕಳದಿಂದ ತರಲು ಸುಮಾರು 7 ತಿಂಗಳುಗಳ ಕಾಲವೇ ಹಿಡಿಯಿತು. ಇನ್ನು ಮೇಲ್ಕಂಡ ಬೃಹತ್ ದೇವಸ್ಥಾನಗಳು ಹೇಗೆ ನಿರ್ಮಾಣವಾಯಿತು ಎನ್ನುವುದೇ ಆಶ್ಚರ್ಯ ಎಂದರು.

ಅಜಂತಾ ಎಲ್ಲೋರ ದೇವಸ್ಥಾನದ ಬಗ್ಗೆ ಮಾತನಾಡಿದ ಶ್ರೀ ಶ್ರೀನಾಥ್‌ರವರು ಅದು ಏಕಾಶಿಲಾ ದೇವಸ್ಥಾನವಾಗಿದ್ದು, ಒಂದು ಬೆಟ್ಟವನ್ನೇ ಕೆತ್ತುತ್ತಾ ಕೆಳಗೆ ಸಾಗಿದ್ದಾರೆ. 4.8 ಲಕ್ಷಟನ್ ಕಲ್ಲುಕೆತ್ತಿದ್ದು, 1 ಗಂಟೆಗೆ 5 ಟನ್ ಕೆತ್ತನೆಯಾಗಿದ್ದು 18 ವರ್ಷಗಳ ಕಾಲ ಕೆಲಸವಾಗಿದೆ. ಇನ್ನು ತಂತ್ರಜ್ಞಾನ ನಿರ್ವಹಣೆ ಮತ್ತು ಅದ್ಭುತ ಶಿಲ್ಪಕಲೆಯನ್ನು ಹೊಂದಿರುವ ಈ ದೇವಸ್ಥಾನವು 37 ಗುಹೆಗಳನ್ನು ಹೊಂದಿದ್ದು ಇಂದಿಗೂ ಅದರ ವೈಭವವನ್ನು ಸಾರುತ್ತಿರುವುದು ನಿಗೂಢವಾದ ಅಂಶವಾಗಿದ್ದು ಅದು ಮನುಷ್ಯ ಮಾತ್ರ ನಿರ್ಮಾಣವಲ್ಲವೆಂದೆನಿಸಿದೆ.

1520 ರಲ್ಲಿ ಮ್ಯಾಪ್‌ವೊಂದು ಇದ್ದು ಕೈರೋ ಪ್ರದೇಶ ಇದಕ್ಕೆ ಸರಿಯಾಗಿ ಹೊಂದಾಣಿಕೆಯಾಗುತ್ತದೆ. ಇದರಿಂದ ಬೇರೆ ಗ್ರಹಗಳಿಂದ ಜನರು ಬಂದಿರಬಹುದು ಎಂದು ಊಹಿಸಲಾಗಿದೆ. ಲಡಾಕ್‌ನಲ್ಲಿರುವ










ನೆಕ್ಲು ಪಾಸ್ ಇಂದಿಗೂ ತನ್ನ ನಿಗೂಢತೆಯನ್ನು ಹೊಂದಿದ್ದು ಆ ಪ್ರದೇಶದಲ್ಲಿ ವಿಮಾನಗಳು ಇಲ್ಲಿ ಹಾದು ಹೋದರೆ ಹಾಳಾಗುತ್ತದೆ. ಹಾಗೆಯೇ ಕೈಲಾಸ ಪರ್ವತವನ್ನು ಈವರೆಗೂ ಹತ್ತಿದವರು ಯಾರೂ ಇಲ್ಲ. ಈ ಹಿಂದೆ ಯಾರೋ ಒಬ್ಬರು ಅದನ್ನು ಸ್ವಲ್ಪ ಭಾಗಹತ್ತಿ ಬೇಗನೇ ಮುಪ್ಪಾಗಿರುವುದರ ಅನುಭವವನ್ನು ಹೇಳಿಕೊಂಡಿದ್ದಾರೆ. ಇದರ ತಳಭಾಗದಲ್ಲಿ ಮಾನಸ ಸರೋವರವಿದೆ. 300 ಮೀಟರ್ ಆಚೆಯಲ್ಲಿ ರಾಕ್ಷಸತಲವೆಂಬ ಸರೋವರವಿದೆ. ಇದು ಕೂಡ ವಿಶಿಷ್ಟ ಹಾಗೂ ಭಯಾನಕ ಅನುಭವಗಳನ್ನು ನೀಡಿದೆ. ಉತ್ತರಾಖಾಂಡದ ರೂಪುಕುಂಡ, ಮಧ್ಯಪ್ರದೇಶದ ಭೀಮ್‌ಕುಂಡ್‌ವು 50 ಮೀಟರ್ ಆಳವಿದೆ. ಶುದ್ಧ ನೀಲಿ ಬಣ್ಣದ ನೀರು ಇಲ್ಲಿದ್ದು 1 ಮೀಟರ್ ಜಾಸ್ತಿ ನೀರು ಶೇಖರಣೆಯಾದರೆ ಪ್ರವಾಹ ಉಂಟಾಗುತ್ತೆ. ಕಡಿಮೆಯಾದರೆ ಬರ ಬರುತ್ತದೆ. ಇವೆಲ್ಲವೂ ಇಲ್ಲಿನ ವಿಸ್ಮಯ ಎಂದರು. ಶೃಂಗೇರಿಯಲ್ಲಿರುವ ಪುರಾತನ ದೇಗುಲದಲ್ಲಿ ಇಂದಿಗೂ ಸೂರ್ಯ ರಶ್ಮಿ ಆಯಾ ರಾಶಿಗೆ ತಕ್ಕಂತೆ ಅಲ್ಲಿನ ಕಂಬಗಳಿಗೆ ಬೀಳುತ್ತಿರುತ್ತದೆ. ಇವೆಲ್ಲವೂ ಈ ಭೂಮಿಯ ನಿಗೂಢತೆ ಹಾಗೂ ವಿಸ್ಮಯದ ಅಂಶಗಳು ಎನ್ನುತ್ತಾ ಹೆಚ್ಚಿನ ಮಾಹಿತಿಯನ್ನು ಗೂಗಲ್‌ನಲ್ಲೂ ಪಡೆಯಬಹುದು ಎಂದು ತಿಳಿಸಿದರು.

ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ಈ ಪ್ರಪಂಚದಲ್ಲಿ ಎಲ್ಲವೂ ನಿಗೂಢವೇ. ಇಲ್ಲಿ ಒಬ್ಬರನ್ನೊಬ್ಬರು ಅರಿಯುವುದೇ ನಿಗೂಢ. ಇಂದು ಈ ಸಭೆಯಲ್ಲಿ ಲೋಕದ ಹಲವಾರು ನಿಗೂಢತೆಗಳನ್ನು ಅನಾವರಣಗೊಳಿಸಿದ ಶ್ರೀನಾಥರವರಿಗೆ ಅಭಿನಂದನೆಗಳು ಎಂದು ತಿಳಿಸಿ, ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು. ಅಂದು ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಸಭೆಗೆ ಉಪಹಾರದ ವ್ಯವಸ್ಥೆ ಮಾಡಿದ್ದ ರೊ.ಕೆ.ಸೂರ್ಯನಾರಾಯಣ ಉಡುಪರಿಗೂ ಸಹ ವಂದನೆಗಳನ್ನು ತಿಳಿಸಿದರು.




ದಿನಾಂಕ: 20–01–2026, ಮಂಗಳವಾರದಂದು ಪಿ. ನಾರಾಯಣ ಅಭಿನಂದನಾ ಸಮಿತಿ ವತಿಯಿಂದ ನಮ್ಮ ರೋಟರಿ ಕ್ಲಬ್ ಪಿತಾಮಹಾರಾದ ಪಿಡಿಜಿ ಡಾ. ಪಿ. ನಾರಾಯಣ್‌ರವರ 'ಯೋಜಕ' ಅಭಿನಂದನಾ ಗ್ರಂಥ ಮತ್ತು 'ಸಂತೃಪ್ತ ಸಾಧಕ' ಸಾಕ್ಷ್ಯಚಿತ್ರ ಬಿಡುಗಡೆ ಸಮಾರಂಭ ನಡೆಯಿತು,












ದಿನಾಂಕ: 21–01–2026, ಬುಧವಾರದಂದು ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ 'ರಸ್ತೆ ಸುರಕ್ಷತಾ ಸಪ್ತಾಹ ಮತ್ತು ಟ್ರಾಫಿಕ್ ರೂಲ್ಸ್' ಬಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹೆಚ್. ಎಸ್. ರುದ್ರಪ್ಪ ನ್ಯಾಷನಲ್ ಪಿ.ಯು. ಕಾಲೇಜಿನಲ್ಲಿ ನಡೆಸಲಾಯಿತು.



ಸಂಪಾದಕೀಯ


## ಖಾಲಿ ಕುರ್ಚಿಯ ಕಥೆ

ಅಲ್ಲಿ ಗುರು ಶಿಷ್ಯರೆಲ್ಲರೂ ಊಟಕ್ಕೆ ಕುಳಿತುಕೊಳ್ಳುವ ಜಾಗದಲ್ಲಿ ಒಂದು ಖಾಲಿ ಕುರ್ಚಿ ಸದಾ ಇಡಲಾಗುತ್ತಿತ್ತು. ಶಿಷ್ಯ ಸಮೂಹಕ್ಕೆ ತಮ್ಮ ಗುರುಗಳು ಯಾವತ್ತೂ ಆ ಖಾಲಿ ಕುರ್ಚಿಯಲ್ಲಿ ಕೂಡದ ಬಗ್ಗೆ ದಿನವೂ ಕುತೂಹಲ. ಆ ಗುರುಗಳು ಆ ಕುರ್ಚಿಯಲ್ಲಿ ಕೂಡುತ್ತಾರೆಂದೇ ನಿತ್ಯದ ನಿರೀಕ್ಷೆ. ಆದರೆ ಯಾರೊಬ್ಬರೂ ಏಕೆ, ಏನು ಎಂದು ಪ್ರಶ್ನೆ ಮಾಡುವ ಧೈರ್ಯ ತೋರುತ್ತಿರಲಿಲ್ಲ. ಗುರುಗಳು ಕೂಡಾ ಎಲ್ಲ ಶಿಷ್ಯಂದಿರ ಜೊತೆಗೆ ತಮಗೆ ಆ ಖಾಲಿ ಕುರ್ಚಿ ಕಾಣುವ ಹಾಗೆ ಅದಕ್ಕೆ ಅಭಿಮುಖವಾಗಿಯೇ ಅದನ್ನು ನೋಡುತ್ತಾ ಕೂತು ಬಿಡುತ್ತಿದ್ದರೇ ಹೊರತು ಅದರ ಮೇಲೆ ಕೂಡಲು ಮನಸ್ಸು ಮಾಡಲೇ ಇಲ್ಲ.

ಅಂತೂ ಇಂತೂ ಒಬ್ಬ ವಿದ್ಯಾರ್ಥಿ ಧೈರ್ಯ ಮಾಡಿ ಕೇಳಿಯೇ ಬಿಟ್ಟ, 'ಗುರುಗಳೇ ಆ ಕುರ್ಚಿ ನಿಮಗಾಗಿಯೇ ಅಲ್ಲವೇ? ನೀವೇಕೆ ಅದರ ಮೇಲೆ ಕೂಡುವುದಿಲ್ಲ' ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರವೇ ಬಹಳ ಭಿನ್ನವಾಗಿತ್ತು. 'ಅದು ಕೇವಲ ಖಾಲಿ ಕುರ್ಚಿಯಲ್ಲ ಮತ್ತು ಅದರ ಮೇಲೆ ಕೂಡುವುದು ಅಷ್ಟು ಸುಲಭವಲ್ಲ. ಎಲ್ಲವನ್ನು ಬಿಟ್ಟುಕೊಟ್ಟು ಖಾಲಿಯಾಗಬೇಕು ಎಂದು ಸದಾ ನನ್ನನ್ನು ಎಚ್ಚರಿಸುವ ಜಾಗವದು. ನಾನು ಪ್ರತಿನಿತ್ಯ ಏನಾದರೂ ಒಂದು ಕೆಲಸ ಮಾಡುತ್ತಲೇ ಇರುತ್ತೇನೆ. ಬೋಧನೆ, ಸಹಾಯ, ಸಾಂತ್ವನ, ಅಡುಗೆ, ತೋಟಗಾರಿಕೆ, ಪ್ರಾಣಿಗಳಿಗೆ ಊಟ ಹಾಕುವುದು, ಇತ್ಯಾದಿ. ಆದರೆ ನಾನು ಏನೇ ಮಾಡಿದರೂ ಅದರ ಒಳಗೆ ಅಹಂಕಾರ ಮನೆ ಮಾಡಿರುತ್ತದೆ. ನಾನು ಮಾಡಿದೆ, ನಾನು ಧನ್ಯ, ನಾನು ಭಿನ್ನ ಹೀಗೇ ಏನಾದರೊಂದು ಭಾವಕ್ಕೆ ಅಂಟಿಕೊಂಡೇ ವ್ಯವಹರಿಸುತ್ತೇನೆ. ಪ್ರತಿನಿತ್ಯ ಒಂದು ಸಣ್ಣ ಸ್ವಾರ್ಥ ನನ್ನಲ್ಲಿ ಇದ್ದೇ ಇರುತ್ತದೆ. ಈ ಭಾವಗಳಿಂದ ನಾನು ಯಾವತ್ತೂ ಖಾಲಿ ಆಗುವುದೇ ಇಲ್ಲ. ನನ್ನನ್ನು ನಾನು ಪಕ್ಕಕ್ಕೆ ಇಟ್ಟು ಖಾಲಿಯಾಗಬೇಕು ಎಂಬುದನ್ನು ಆ ಖಾಲಿ ಕುರ್ಚಿ ಸದಾ ನನ್ನನ್ನು ಎಚ್ಚರಿಸುತ್ತದೆ. ನಾನು ಇನ್ನೂ ಮೃದುವಾಗಬೇಕಾಗಿದೆ. ಇನ್ನೂ ಕಲಿಯುಬೇಕಾಗಿದೆ. ಇನ್ನೂ ಹಗುರಾಗಬೇಕಿದೆ. ಇನ್ನೂ ಖಾಲಿಯಾಗಬೇಕಾಗಿದೆ.'

ಇದು ಕೇವಲ ಆ ಗುರುವಿನ ಕುರ್ಚಿಯ ಕಥೆಯಲ್ಲ ಅನಿಸುತ್ತದೆ. ಪಾತ್ರ ಗುರುವಿನದು ಅಷ್ಟೇ. ನಾವೆಲ್ಲರೂ ನಮ್ಮ ಪಾತ್ರಕ್ಕಾಗಿ ಒಂದು ಕುರ್ಚಿಯನ್ನು ಆಯ್ಕೆ ಮಾಡಿಕೊಂಡಿರುತ್ತೇವೆ. ಅದನ್ನು ಖಾಲಿಬಿಟ್ಟು, ದೂರವಿಟ್ಟು ಎಂದೂ ಯೋಚಿಸಲಾರೆವು. ಮಾಡುವ ಕೆಲಸಗಳನ್ನು ಮಾಡುತ್ತ ನಿರ್ವಿಕಾರಗಳನ್ನು ಬಿಟ್ಟುಕೊಟ್ಟು ಖಾಲಿ ಆಗುವುದಿದೆ ನೋಡಿ. ಅದು ಸುಲಭವಲ್ಲ. ಒಂದಿಲ್ಲೊಂದು ನಿರೀಕ್ಷೆ ಮತ್ತು ಅದು ಮಾಡುವ ಕೊರಗಿನ ಗಾಯವನ್ನು ಹೊತ್ತುಕೊಂಡೇ ನಾವು ವ್ಯವಹರಿಸುತ್ತಿದ್ದೇವೆ. ತಂದೆ, ತಾಯಿ, ಅಣ್ಣ, ಅಕ್ಕ, ಯಾವುದೇ ಸಂಬಂಧಗಳು ಇರಬಹುದು. ಅವೆಲ್ಲವೂ ಒಂದು ಸ್ಥಾನವೇ ಆಗಿದೆ. ನಮ್ಮೊಳಗೆ ಇಂಥ ಖಾಲಿ ಕುರ್ಚಿಯೊಂದರ ಅಗತ್ಯ ಇದೆ. ಈ ಕುರ್ಚಿ ಸದಾ ಖಾಲಿಯಾಗುವ ಎಚ್ಚರವನ್ನು ಕಲಿಸುತ್ತಲೇ ಇರುತ್ತದೆ. ನಿರೀಕ್ಷೆ ಮತ್ತು ಲಾಭದ ಜೊತೆಗೆ ಗುದ್ದಾಡುತ್ತಲೇ ಇರುವ ನಮಗೆ ಈ ಖಾಲಿ ಕುರ್ಚಿ ಹೊಸದಾಗಿ ಬಾಳಲು ಪ್ರೇರೇಪಣೆಯಾಗಬಲ್ಲದು.

• ರೊ. ಎಂ. ಮಾಧವಾಚಾರ್




## ಲಾಲಾಜಲ (Salivation) ಕಡಿಮೆಯಾಗಿರುವುದನ್ನು ಸುಧಾರಿಸಲು ಕೆಲವು ಸರಳ ಹಾಗೂ ಪರಿಣಾಮಕಾರಿ ಮನೆಮದ್ದುಗಳು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- ಸಾಕಷ್ಟು ನೀರು ಕುಡಿಯಿರಿ. ದೇಹದಲ್ಲಿ ನೀರಿನ ಕೊರತೆ ಇದ್ದರೆ ಲಾಲಾಜಲ ಕಡಿಮೆಯಾಗುತ್ತದೆ. ದಿನಕ್ಕೆ ಕನಿಷ್ಟ 2-3 ಲೀಟರ್ ನೀರು ಕುಡಿಯುವುದು ಅಗತ್ಯ.
- ಹುಳಿ ರುಚಿಯ ಆಹಾರಗಳಾದ ನಿಂಬೆ, ಆಮ್ಲಾ (ನೆಲ್ಲಿಕಾಯಿ), ಹುಳಿ ಹಣ್ಣುಗಳು ಲಾಲಾಜಲ ಉತ್ಪಾದನೆಗೆ ಸಹಾಯ ಮಾಡುತ್ತವೆ.
- ಸ್ವಲ್ಪ ಶುಂಠಿಯನ್ನು ಕತ್ತರಿಸಿ ಅದರ ತುಂಡು ಚಪ್ಪರಿಸುವುದರಿಂದ ಲಾಲಾಜಲ ಹೆಚ್ಚಾಗುತ್ತದೆ.
- ಒಂದು ಚಮಚ ಜೀರಿಗೆ ನೀರನ್ನು ಕುದಿಸಿ ತಣ್ಣಗಾಗಿಸಿ ಕುಡಿಯಿರಿ.
- ಸೋಂಪು ಕಾಳನ್ನು ಚಪ್ಪರಿಸುವುದರಿಂದ ಲಾಲಾ ಜಲ ಗ್ರಂಥಿಗಳನ್ನು ಉದ್ದೀಪನಗೊಳಿಸುತ್ತದೆ.
- ಬಾಯಿಯನ್ನು ನಿತ್ಯವೂ ಸ್ವಚ್ಛವಾಗಿಟ್ಟುಕೊಳ್ಳುವುದು, ನಾಲಿಗೆಯನ್ನು ಸ್ವಚ್ಛಗೊಳಿಸುವುದನ್ನು ಮರೆಯಬೇಡಿ.
- ತಂಬಾಕು, ಸಿಗರೇಟು ತಪ್ಪಿಸಿ, ಇವು ಲಾಲಾಜಲ ಉದ್ಪಾದನೆ ಕಡಿಮೆ ಮಾಡುತ್ತವೆ.

## ❇ Wedding Anniversary ❇

| | |
|---|---|
| Sunitha V. | 3rd Jan |
| Narendra Jain & Sunitha Jain | 23rd Jan |
| Sunil Sastry H.U. &ShruthiSastry | 28th Jan |
| K.S.Shailin & Sheela H.M. | 28th Jan. |






ದಿನಾಂಕ: 23, 24 & 25 ಜನವರಿಯಂದು ಹಾಸನದಲ್ಲಿ ನಡೆಯುವ 'ಸ್ಪಂದನಾ' ಝೋನ್ 10ನೇ ರೋಟರಿ ಡಿಸ್ಟ್ರಿಕ್ಸ್ ಕಾನ್ಫರೆನ್ಸ್‌ನಲ್ಲಿ ಪಾಲ್ಗೊಳ್ಳಲು ಅಧ್ಯಕ್ಷರನ್ನೊಡಗೂಡಿ ರೋಟರಿ ಕ್ಲಬ್‌ನ ಸದಸ್ಯರುಗಳು ಹೊರಟು ನಿಂತ ಕ್ಷಣ.



**ಮುದ್ದುರಾಮನ ಚೌಪದಿ...**

ನೋಡಿ ನಕ್ಕವರಂದು ಎಲ್ಲಿ ಹೋದರೊ ಇಂದು ?
ಕಾದು ಕುಳಿತಿರಬಹುದು ಬರುವವರಿಗಾಗಿ.
ಎಲ್ಲೋ ಸೇರಲೇಬೇಕು ಒಂದಲ್ಲ ಒಂದು ದಿನ;
ಎಂದಿದೆಯೊ ಆ ದಿವಸ – ಮುದ್ದುರಾಮ

To, *Book Post*